# ಆಯ್ಕೆ

ಒಂಬತ್ತು ಗಂಟೆ ಆಗೋ ಹೊತ್ತಿಗೆ ಹಸಿವಿನಿಂದ ಗಲಾಟೆ ಶುರು ಮಾಡ್ತಾಳೆ. ಎಲ್ಲಿದ್ದರೂ ಅಷ್ಟೊತ್ತಿಗೆ ಮನೆಗೆ ಹೋಗಲೇಬೇಕು ಎಂದು ಗೊಣಗುತ್ತಲೇ ಆಟೋ ಬುಕ್ ಮಾಡಿದ್ದಳು ಪ್ರಿಯಾ. ಗಾಳಿಗೆ ಮೈನಡುಗಲು ಪ್ರಾರಂಭವಾದಾಗಲೇ ಬ್ಯಾಗಲ್ಲಿ ಸ್ವೆಟರ್ ಇಲ್ಲ ಎನ್ನುವ ಅರಿವಾಗಿದ್ದು. ಇರುವ ದುಪಟ್ಟಾವನ್ನೇ ಮೈತುಂಬಾ ಹೊದ್ದವಳಿಗೆ ದಿನೇದಿನೇ ದಪ್ಪ ಆಗುತ್ತಿದ್ದೇನೆ ಎನ್ನುವ ಯೋಚನೆ ಇನ್ನಷ್ಟು ಕಿರಿಕಿರಿ ಉಂಟು ಮಾಡಿತ್ತು.

